56 ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ನಗರ
ಎಸ್.ಸಿ.ಸಂಖ್ಯೆ 1319/2024

ಸಿ.ಡಬ್ಲ್ಯೂಃ12 ಪಿ.ಡಬ್ಲ್ಯೂಃ4

ಪ್ರಮಾಣ ವಚನ ಭೋದಿಸಲಾಯಿತು.

ದಿಃ17.02.2026

| | |
|---|---|
| ಹೆಸರು | ವಾಸುದೇವ್.ಜಿ.ಆರ್ |
| ತಂದೆಯ ಹೆಸರು | ರಾಮೇಗೌಡ |
| ವಯಸ್ಸು | 34 ವರ್ಷಗಳು |
| ಕೆಲಸ | ಫ್ಲವರ್ ಡೆಕೋರೇಟರ್ |
| ವಾಸ | ಕಾಮಾಕ್ಷಿ ಪಾಳ್ಯ, ಬೆಂಗಳೂರು |

ಮುಖ್ಯ ವಿಚಾರಣೆಃ ವಿಶೇಷ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ದಿಃ11.06.2024 ರಂದು ಕಾಮಾಕ್ಷಿ ಪಾಳ್ಯ ಪೊಲೀಸ್ ಠಾಣೆಗೆ ಬೆಳಗಿನ ಜಾವ 1.00 ಗಂಟೆಗೆ ಹೋಗಿದ್ದೆನು. ನನ್ನ ಜೊತೆಗೆ ನನ್ನ ಸ್ನೇಹಿತ ಚಾಸಾ 11 ವೆಂಕಟೇಶ್ ಬಂದಿದ್ದನು. ಕೊಲೆ ಕೇಸಿನಲ್ಲಿ ಮಹಜರ್ ಮಾಡಬೇಕಾಗಿದೆ ಸಹಿ ಹಾಕುತ್ತೀರಾ ಎಂದು ಕೇಳಿದರು. ಅದಕ್ಕೆ ನಾವು ಒಪ್ಪಿದೆವು. ಪೊಲೀಸ್ ಠಾಣೆಯಲ್ಲಿಯೇ ನಮ್ಮಗಳ ಹೆಸರು, ವಿಳಾಸ, ಫೋನ್ ನಂಬರ್ ಪಡೆದರು. ನೋಟೀಸ್ ಕೊಟ್ಟರು. ಆ ನೋಟೀಸನ್ನು ಈಗ ನೋಡುತ್ತಿದ್ದು ನಿಪಿ.18 ಎಂದು, ಅದರಲ್ಲಿರುವ ಸಾಕ್ಷಿದಾರರ ರುಜುವನ್ನು ನಿಪಿ.18(ಎ) ಎಂದು ಗುರುತಿಸಲಾಯಿತು. ಪೊಲೀಸರು ತಮ್ಮ ಠಾಣೆಯ ಕೇಸ್ ನಂ.250/2024 ಕ್ಕೆ ಸಂಬಂಧಪಟ್ಟಿದ್ದು ಅಂತ ಹೇಳಿದರು.

ಠಾಣೆಯಲ್ಲಿ 7 ಜನರು ಇದ್ದಾರೆ ಅಂತ ಹೇಳಿದರು. ನಾವು ಒಳಗೆ ಹೋಗಿ ನೋಡಿದಾಗ 7 ಜನರು ಇದ್ದರು. ಅವರ ಕಡೆಯಿಂದ ಪೊಲೀಸರು ಹೆಸರುಗಳನ್ನು ಹೇಳಿಸಿದರು. ನಾನು ಕೇಳಿದಂತೆ ಅವರ ಹೆಸರು ಪವನ್, ವಿನಯ್, ಪ್ರದೋಷ್, ಲಕ್ಷ್ಮಣ್, ದೀಪಕ್ ಮತ್ತು ನಂದೀಶ್ ಅಂತ ತಿಳಿಯಿತು. ಇನ್ನೊಬ್ಬನ ಹೆಸರು ನೆನಪಾಗುತ್ತಿಲ್ಲ. ಇವರನ್ನು ನೋಡಿದರೆ ಗುರುತಿಸುತ್ತೇನೆ.

ವಿಸಿ ಮೂಲಕ ಹಾಜರಾದ 11 ನೇ ಆರೋಪಿಯನ್ನು ನಾಗರಾಜ್ ಎಂದು, 12 ನೇ ಆರೋಪಿಯನ್ನು ಲಕ್ಷ್ಮಣ್ ಎಂದು, 14 ನೇ ಆರೋಪಿಯನ್ನು ಪ್ರದೋಷ್ ಎಂದು ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ 5 ನೇ ಆರೋಪಿಯನ್ನು ನಂದೀಶ್ ಎಂದು, 13 ನೇ ಆರೋಪಿಯನ್ನು ದೀಪಕ್ ಎಂದು, 3 ನೇ ಆರೋಪಿಯನ್ನು ಪವನ್ ಎಂದು ಗುರುತಿಸಿರುತ್ತಾರೆ. 10 ನೇ ಆರೋಪಿ ಗೈರುಹಾಜರಿದ್ದು ಆತನನ್ನು ಗುರುತಿಸಲು 10 ನೇ ಆರೋಪಿ ಪರ ವಕೀಲರು ಆಕ್ಷೇಪಿಸಿರುತ್ತಾರೆ. ಆದ್ದರಿಂದ 10 ನೇ ಆರೋಪಿಗೆ ಮುಂದಿನ ದಿನಾಂಕದಂದು ನ್ಯಾಯಾಲಯದ ಮುಂದೆ ಹಾಜರಿರುವಂತೆ 10 ನೇ ಆರೋಪಿಗೆ ಸೇರಿದಂತೆ ಉಳಿದ ಆರೋಪಿತರಿಗೆ ಎಚ್ಚರಿಕೆ ಕೊಡಲಾಯಿತು.

ಈ ಮೇಲ್ಕಂಡ ಆರೋಪಿತರು ತಮ್ಮ ಬಳಿ ಇದ್ದ ಮೊಬೈಲ್‌ಗಳನ್ನು ತೆಗೆದು ತೋರಿಸಿದರು. ಮೇಲ್ಕಂಡ ಆರೋಪಿತರ ಬಳಿ ಹ್ಯಾಂಡ್ ರಾಯ್ಡ್ 8 ಫೋನ್ ಗಳು ಇದ್ದವು. ಅವುಗಳಲ್ಲಿ ಕೆಲವೊಂದು ಸ್ಯಾಮ್ ಸಂಗ್ ಇನ್ನು ಕೆಲವೊಂದು ಐ ಫೋನ್ ಗಳು ಇದ್ದವು. ಈಗ ಮತ್ತೆ ಹೇಳುತ್ತೇನೆ 4 ಸ್ಯಾಮ್ ಸಂಗ್ ಫೋನ್ ಗಳು, 2 ಐ ಫೋನ್, ಒಂದು ಒಪೋ ಮತ್ತು ಒಂದು ಒನ್ ಪ್ಲಸ್ ಗಳು ಇದ್ದವು.

ನಮ್ಮ ಮುಂದೆಯೇ ಮೇಲ್ಕಂಡ ಆರೋಪಿತರಿಂದ ತಮ್ಮ ಬಳಿಯಲ್ಲಿದ್ದ ಮೊಬೈಲ್‌ಗಳ ಲಾಕ್ ಓಪನ್ ಮಾಡಿಸಿ ಸೆಟ್ಟಿಂಗ್ಸ್ ಗೆ ಹೋಗಿ ಅಬೋಟ್ ನಲ್ಲಿ ಪರಿಶೀಲಿಸಿ ಸಿಮ್ ಮತ್ತು ಐ.ಎಂ.ವಿ ನಂಬರ್ ಗಳನ್ನು ಪಡೆದರು. ಪುನಃ ಮೇಲ್ಕಂಡ ಆರೋಪಿತರಿಂದ ತಮ್ಮ ಬಳಿಯಲ್ಲಿದ್ದ ಮೊಬೈಲ್‌ಗಳನ್ನು ಲಾಕ್ ಮಾಡಿ ಪ್ರತಿಯೊಂದು ಮೊಬೈಲನ್ನು ಪ್ರತ್ಯೇಕ ಕವರ್ ನಲ್ಲಿ ಹಾಕಿ ಸೀಲ್ ಮಾಡಿದರು. ಅವುಗಳ ಮೇಲೆ ನಮ್ಮ ರುಜುಗಳನ್ನು ಪಡೆದರು. ಯಾವ ಆರೋಪಿಯ ಮೊಬೈಲ್ ಕವರ್ ನಲ್ಲಿ ಹಾಕಲಾಗಿರುತ್ತದೆಯೋ ಅದಕ್ಕೆ ಅವರ ರುಜು ಪಡೆದರು. ನಂತರ ಸಾಕ್ಷಿಯಾಗಿ ನನ್ನ ರುಜು ಪಡೆದರು. ಸಾಕ್ಷಿಯಾಗಿ ರುಜು ಮಾಡಿರುವುದನ್ನು ನೋಡಿದರೆ ಗುರುತಿಸುತ್ತೇನೆ. ಅದು ಅಮಾನತ್ತು ಮಹಜರ್ ಆಗಿದ್ದು ಅದನ್ನು ನಿಪಿ.19 ಎಂದು, ಅದರಲ್ಲಿರುವ ಸಾಕ್ಷಿದಾರರ ರುಜುವನ್ನು ನಿಪಿ.19(ಎ) ಎಂದು ಗುರುತಿಸಲಾಯಿತು. ಮುಚ್ಚಳಿಕೆಯನ್ನು ನಿಪಿ.20 ಎಂದು, ಅದರಲ್ಲಿರುವ ಸಾಕ್ಷಿದಾರರ ರುಜುವನ್ನು ನಿಪಿ.20(ಎ) ಎಂದು ಗುರುತಿಸಲಾಯಿತು. ನನ್ನ ಮುಂದೆ ಅಮಾನತ್ತುಪಡಿಸಿಕೊಂಡ ಮೊಬೈಲ್‌ಗಳನ್ನು ನೋಡಿದರೆ ಗುರುತಿಸುತ್ತೇನೆ.

ನ್ಯಾಯಾಲಯದ ಮುಂದಿರುವ 8 ಕವರ್ ಗಳ ಮೇಲಿರುವ ಸೀಲ್ ಗಳನ್ನು ಆರೋಪಿ ಪರ ವಕೀಲರಿಗೆ ಪರಿಶೀಲಿಸಲು ಸೂಚಿಸಲಾಯಿತು. ಆರೋಪಿ ಪರ ವಕೀಲರು ಅವುಗಳನ್ನು ಪರಿಶೀಲಿಸಿ ಸುಸ್ಥಿತಿಯಲ್ಲಿವೆ ಎಂದು ತಿಳಿಸಿರುತ್ತಾರೆ. ಸ್ಯಾಮ್‌ಸಂಗ್ ಗೆಲಾಕ್ಸಿ ಪೋನನ್ನು ಸಾಕ್ಷಿದಾರರು ಗುರುತಿಸಿದ್ದು ಅದನ್ನು ಮು.ಮಾ 10 ಎಂದು, ಅದರಲ್ಲಿರುವ ಸಾಕ್ಷಿದಾರರ ರುಜುವನ್ನು ಮು.ಮಾ 10(ಎ) ಎಂದು, ಸ್ಯಾಮ್‌ಸಂಗ್ ಎ-34 ಪೋನನ್ನು ಸಾಕ್ಷಿದಾರರು

ಗುರುತಿಸಿದ್ದು ಅದನ್ನು ಮು.ಮಾ 11 ಎಂದು, ಅದರಲ್ಲಿರುವ ಸಾಕ್ಷಿದಾರರ ರುಜುವನ್ನು ಮು.ಮಾ 11(ಎ) ಎಂದು, ಸ್ಯಾಮ್‌ಸಂಗ್ ಗೆಲಾಕ್ಸಿ ಎ-23 ಪೋನನ್ನು ಸಾಕ್ಷಿದಾರರು ಗುರುತಿಸಿದ್ದು ಅದನ್ನು ಮು.ಮಾ 12 ಎಂದು, ಅದರಲ್ಲಿರುವ ಸಾಕ್ಷಿದಾರರ ರುಜುವನ್ನು ಮು.ಮಾ 12(ಎ) ಎಂದು, ಸ್ಯಾಮ್ ಸಂಗ್ ಗೆಲಾಕ್ಸಿ ಜೆಡ್ ಪೋಲ್ಡ್ 5 ಪೋನನ್ನು ಸಾಕ್ಷಿದಾರರು ಗುರುತಿಸಿದ್ದು ಅದನ್ನು ಮು.ಮಾ 13 ಎಂದು, ಅದರಲ್ಲಿರುವ ಸಾಕ್ಷಿದಾರರ ರುಜುವನ್ನು ಮು.ಮಾ 13(ಎ) ಎಂದು, ಐ ಪೋನ್-14 ನನ್ನು ಸಾಕ್ಷಿದಾರರು ಗುರುತಿಸಿದ್ದು ಅದನ್ನು ಮು.ಮಾ 14 ಎಂದು, ಅದರಲ್ಲಿರುವ ಸಾಕ್ಷಿದಾರರ ರುಜುವನ್ನು ಮು.ಮಾ 14(ಎ) ಎಂದು, ಒನ್ ಪ್ಲಸ್ ಪೋನನ್ನು ಸಾಕ್ಷಿದಾರರು ಗುರುತಿಸಿದ್ದು ಅದನ್ನು ಮು.ಮಾ 15 ಎಂದು, ಅದರಲ್ಲಿರುವ ಸಾಕ್ಷಿದಾರರ ರುಜುವನ್ನು ಮು.ಮಾ 15(ಎ) ಎಂದು, ವಿವೊ ವಿ-19 ಪೋನನ್ನು ಸಾಕ್ಷಿದಾರರು ಗುರುತಿಸಿದ್ದು ಅದನ್ನು ಮು.ಮಾ 16 ಎಂದು, ಅದರಲ್ಲಿರುವ ಸಾಕ್ಷಿದಾರರ ರುಜುವನ್ನು ಮು.ಮಾ 16(ಎ) ಎಂದು, ಐ ಪೋನ್-12 ಪೋನನ್ನು ಸಾಕ್ಷಿದಾರರು ಗುರುತಿಸಿದ್ದು ಅದನ್ನು ಮು.ಮಾ 17 ಎಂದು, ಅದರಲ್ಲಿರುವ ಸಾಕ್ಷಿದಾರರ ರುಜುವನ್ನು ಮು.ಮಾ 17(ಎ) ಎಂದು ಗುರುತಿಸಲಾಯಿತು.

ಕೊನೆಗೆ ಪೋಟೋ ತೆಗೆದುಕೊಂಡರು. ಆ ಪೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಎರಡು ಪೋಟೋಗಳನ್ನು ಸಾಕ್ಷಿದಾರರು ಗುರುತಿಸಿದ್ದು ಅವುಗಳನ್ನು ನಿಪಿ.21 ಮತ್ತು ನಿಪಿ.22 ಎಂದು, ಸಾಕ್ಷಿದಾರರ ಭಾವಚಿತ್ರವನ್ನು ನಿಪಿ.21(ಎ) ಮತ್ತು ನಿಪಿ.22(ಎ) ಎಂದು ಗುರುತಿಸಲಾಯಿತು.

10 ನೇ ಆರೋಪಿ ಗೈರು ಹಾಜರಿದ್ದು ಆತನನ್ನು ಗುರುತಿಸಲು ಆರೋಪಿ ಪರ ವಕೀಲರು ಆಕ್ಷೇಪಿಸಿರುವುದರಿಂದ ರೂ.2,000/- ಖರ್ಚಿನೊಂದಿಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇ.

(ಐ.ಪಿ.ನಾಯಿಕ)
56 ನೇ ಅಪರ ಸಿಟಿ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು.